


**ISSN: 2454–5813**
IJKR 2023; 9(2): 07-09
© 2023 IJKR
www.kannadajournal.com
Received: 06-01-2023
Accepted: 09-02-2023

**ಸತ್ಯಶ್ರುತಿ ಎಂ**
ಕನ್ನಡ ಸಂಶೋಧನ ವಿದ್ಯಾರ್ಥಿನಿ,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ, ಕರ್ನಾಟಕ, ಭಾರತ

# ಜಂಬುನಾಥ ಕಂಚ್ಯಾಣಿ ಅವರ ಮಕ್ಕಳ ಕವಿತೆಗಳಲ್ಲಿ ವೈಜ್ಞಾನಿಕ ದೃಷ್ಟಿ ಹಾಗೂ ಪರಿಸರ ಪ್ರಜ್ಞೆ

**ಸತ್ಯಶ್ರುತಿ ಎಂ**

**ಪೀಠಿಕೆ**

ಮಕ್ಕಳ ಸಾಹಿತ್ಯದ ತವರೂರು ವಿಜಾಪೂರ ಜಿಲ್ಲೆ ಮೂರು ತಲೆಮಾರುಗಳನ್ನು ಕಾಣುತ್ತಿರುವ ವಿಜಾಪೂರ ಜಿಲ್ಲೆಯ ಮಕ್ಕಳ ಸಾಹಿತ್ಯ ಇಂದು ಹುಲುಸಾಗಿ ಬೆಳೆದಿದೆ. ಜಂಬುನಾಥ ಕಂಚ್ಯಾಣಿಯವರು ಮೂರನೆಯ ತಲೆಮಾರಿನಲ್ಲಿ ಹಲವಾರು ಪ್ರತಿಭಾವಂತ ಮಕ್ಕಳ ಸಾಹಿತಿಗಳಲ್ಲಿ ಎದ್ದು ಕಾಣುವ ಹೆಸರಾಗಿದೆ. ಜಂಬುನಾಥ ಕಂಚ್ಯಾಣಿ ಅವರು ವಿಜ್ಞಾನ ಶಿಕ್ಷಕರು, ಅವರ ಸಾಹಿತ್ಯ ಕೃತಿಯಲ್ಲಿ ವಿಜ್ಞಾನದ ಅವಿಷ್ಕಾರಗಳು, ನಿಯಮ, ತತ್ವ, ಸಿದ್ಧಾಂತಗಳು ಹಾಸುಹೊಕ್ಕಾಗಿ ಸೇರಿಕೊಂಡಿವೆ. ಅವರ ಮಕ್ಕಳ ಸಾಹಿತ್ಯ ರಚನೆಯು ವೈಜ್ಞಾನಿಕ ದೃಷ್ಟಿಯ ಅಡಿಪಾಯದ ಮೇಲೆ ನಿಂತುಕೊಂಡಿದೆ. ಅವರ 'ನಂದನವನ' ಕವನ ಸಂಕಲನ ಬಹುತೇಕ ಅವರ ಪರಿಸರ ಗೀತೆಗಳಿಂದ ತುಂಬಿದೆ. ಇಂದಿನ ವಿಜ್ಞಾನ ಸೌಲಭ್ಯಗಳಿಂದ ನೈಸರ್ಗಿಕ ಪರಿಸರ ಹೇಗೆ ಮಲಿಗೊಳ್ಳುತ್ತಲಿದೆ ಎಂಬುದರಲ್ಲಿ ಉದಾಹರಣೆಗಳೊಂದಿಗೆ ವಿವರಿಸಿದ್ದಾರೆ.

ವಿನಾಶಕಾರಿ ಅಸ್ತ್ರವ ಕಟ್ಟಲು
ಅಣುಶಕ್ತಿಯನ್ನು ಬಳಸಿದರೆ
ಸುಂದರ ತರುಲತೆ ಪ್ರಾಣಿಗಳೆಲ್ಲ
ಭಸ್ಮವಾಗುವವು ಉಳಿದು ಧರೆ

ಅಣುಬಾಂಬ ತಯಾರಿಕೆಯಲ್ಲಿ ಬಳಸುವ ಅಣುಶಕ್ತಿಯಿಂದ ಭೂಮಿಯೇ ಸುಟ್ಟು ಭಸ್ಮವಾಗುವುದು. ಇಂತಹ ಅಪಾಯಕಾರಿ ಪರಮಾಣು ಶಕ್ತಿಯಿಂದ ಒಂದು ರೀತಿ ಲಾಭವಾದರೆ ಇನ್ನೊಂದು ರೀತಿಯಲ್ಲಿ ನಷ್ಟವೇ ಹೆಚ್ಚು ಎಂದು ಹೇಳಬಹುದು.

ಶಶಿಯಂಗಳದಿ
ಭೂಮಿಯ ನೆರಳು
ಬೀಳಲು ಚಂದ್ರ
ಗ್ರಹಣದ ಇರುಳು
ಸೂರ್ಯನಿಗೆದುರು
ಚಂದ್ರನು ಬರಲು
ಅದುವೇ ಸೂರ್ಯ
ಗ್ರಹಣದ ಹಗಲು

ಮಕ್ಕಳಿಗೆ ಸೂರ್ಯಗ್ರಹಣ ಮತ್ತು ಚಂದ್ರಗ್ರಹಣದ ಬಗ್ಗೆ ತಿಳುವಳಿಕೆ ಮೂಡಿಸುತ್ತಾರೆ. ಸೂರ್ಯ, ಚಂದ್ರ, ನಕ್ಷತ್ರಗಳ ಹೆಸರುಗಳನ್ನು ತಿಳಿಸುತ್ತಾರೆ. ಚಂದ್ರನ ಅಂಗಳದಲ್ಲಿ ಭೂಮಿಯ ನೆರಳು ಬೀಳಲು ಅದು ಚಂದ್ರಗ್ರಹಣದ ಇರುಳು, ಸೂರ್ಯನ ಎದುರಿಗೆ ಚಂದ್ರನು ಬರಲು ಅದುವೇ ಸೂರ್ಯಗ್ರಹಣದ ಹಗಲು ಎನ್ನುತ್ತಾರೆ. ಭಾರತೀಯರು ದೈವ ಭಕ್ತರು, ಗ್ರಹಣಗಳು ಸಂಭವಿಸಿದಾಗ ರಾಹು ಕೇತುಗಳು ರಾಕ್ಷಸರಂತೆ ಸೂರ್ಯ, ಚಂದ್ರರನ್ನು ಉಳಿಸಲು ನೀರಿನಲ್ಲಿ ಮುಳುಗಿ ಮಂತ್ರ ಪಠಿಸುವ ಮೂಢ ಆಚರಣೆಗಳನ್ನು ಹೋಗಲಾಡಿಸುವುದರ ಮೂಲಕ ಗ್ರಹಣ ಸಂಭವಿಸುವುದನ್ನು ಪರಿಚಯ ಮಾಡಿಕೊಡುತ್ತಾರೆ. ಸೂರ್ಯಗ್ರಹಣ ಚಂದ್ರಗ್ರಹಣಗಳ ಹಿನ್ನಲೆಯಲ್ಲಿಯ ವೈಜ್ಞಾನಿಕ ಕಾರಣಗಳನ್ನು ಅಲ್ಲಗಳೆದು, ಗ್ರಹ ಪೀಡೆಯೆ ಅದಕ್ಕೆ ಕಾರಣವೆಂದುಕೊಂಡ ಸಾಮಾನ್ಯ ಜನರ ಅಜ್ಞಾನವನ್ನು

**Corresponding Author:**
**ಸತ್ಯಶ್ರುತಿ ಎಂ**
ಕನ್ನಡ ಸಂಶೋಧನ ವಿದ್ಯಾರ್ಥಿನಿ,
ಕರ್ನಾಟಕ ರಾಜ್ಯ ಅಕ್ಕಮಹಾದೇವಿ
ಮಹಿಳಾ ವಿಶ್ವವಿದ್ಯಾನಿಲಯ
ವಿಜಯಪುರ, ಕರ್ನಾಟಕ, ಭಾರತ

ಅಲ್ಲಗಳೆದಿದ್ದಾರೆ. ಜನರ ಮೌಢ್ಯತೆಯನ್ನು ನೀಗಿಸಿ, ಸೃಷ್ಟಿಯ ವಸ್ತುಗಳನ್ನು ವಿಜ್ಞಾನದ ನಿಯಮದಲ್ಲಿ ಕಟ್ಟಿ ಬಂಧಿಸಿದ್ದಾರೆ ಜಂಬುನಾಥ ಕಂಚ್ಯಾಣಿ ಅವರು.

ಬೆಟ್ಟವೇರಿ ಬಂತು
ಹ್ಯಾಲಿ ಧೂಮಕೇತು
ಕಾಲ ಕೆಟ್ಟು ಹೋಯ್ತು
ಅಂತ್ಯ ಕಾಲ ಬಂತು

ಮಕ್ಕಳಿಗೆ ಸೌರವ್ಯೂಹದಲ್ಲಿ ಅಪರೂಪದ ಅತಿಥಿಗಳೆಂದು ಕರೆಯಲಾಗುವ ಧೂಮಕೇತುಗಳನ್ನು ಪರಿಚಯಿಸುತ್ತಾರೆ. ದೀರ್ಘ ಕಕ್ಷಾ ಅವಧಿಯಿಂದಾಗಿ ಅವು ನಮಗೆ ಕಾಣಿಸಿಕೊಳ್ಳುವುದು ವಿರಳ. ಧೂಮಕೇತುಗಳು ಗೋಲಾಕಾರದಲ್ಲಿರುತ್ತವೆ. ಸೂರ್ಯನ ಹತ್ತಿರ ಬಂದಾಗ ಅವು ಕಾಣಿಸಿಕೊಳ್ಳುತ್ತವೆ. ಧೂಮಕೇತುಗಳು ಅಪಶಕುನ ಮತ್ತು ಯುದ್ಧ ಪ್ರವಾಹ ಮುಂತಾದ ವಿಪತ್ತುಗಳು ಬಂದೊದಗುವ ಮುನ್ಸೂಚನೆಗಳೆಂದು ಕೆಲವು ಜನರು ಭಾವಿಸುತ್ತಾರೆ. ಧೂಮಕೇತುಗಳು ಕಾಣಿಸಿಕೊಳ್ಳುವುದು ನೈಸರ್ಗಿಕ ವಿದ್ಯಾಮಾನ ಇವುಗಳಿಗೆ ಭಯಪಡುವ ಕಾರಣವಿಲ್ಲವೆಂದು ಧೂಮಕೇತುಗಳ ಬಗ್ಗೆ ಜನರಲ್ಲಿರುವ ಮೂಢನಂಬಿಕೆ ದೂರಮಾಡಿ ವೈಜ್ಞಾನಿಕ ತಿಳುವಳಿಕೆ ನೀಡುವಲ್ಲಿ ಶಕ್ತವಾಗಿದೆ.

ಹರಿವ ನೀರಿನಲ್ಲಿ ಭವ್ಯ
ಶಕ್ತಿ ಇರುವುದು
ಚಕ್ರ ತಿರುಗಿ ವಿದ್ಯುಚ್ಛಕ್ತಿ
ಹುಟ್ಟಿಕೊಳ್ಳುವುದು
ಜಲದ ಮಹಿಮೆ ಇಷ್ಟೆ ಎಂದು
ಹೇಳಲಾಗದು
ನೀರ ಬಿಟ್ಟು ಜೀವ ಚಕ್ರ
ಉರುಳಲಾರದು

ನೀರು ಅತ್ಯಮೂಲ್ಯವಾದ ಸಂಪತ್ತಾಗಿದೆ. ವಿದ್ಯುತ ತಯಾರಿಕೆ, ಕೃಷಿ, ಉದ್ಯಮಗಳಿಗೆ ನೀರಿನ ಅವಶ್ಯಕತೆ ಎಷ್ಟು ಎಂಬುದರ ಬಗ್ಗೆ 'ಜಲದ ಮಹಿಮೆ' ಕವನದಲ್ಲಿ ತಿಳಿಸಿದ್ದಾರೆ. ಈ ಮೂಲಕ ಮಕ್ಕಳಲ್ಲಿ ವೈಜ್ಞಾನಿಕ ದೃಷ್ಟಿ ಬೆಳೆಯುವಂತೆ ಮಾಡುತ್ತಾರೆ.

ಸ್ವಾರ್ಥದಾಸೆಗಾಗಿ ಕಾಡು
ಕಡಿಯುತಿರುವ ಮಾನವ
ಬಾಳುತಿಹನು ಕಡಿಮೆ ಮಾಡಿ
ಪ್ರಾಣವಾಯು ಗಾತ್ರವ
ನಾಶದಂಚಿನಲ್ಲಿ ಇರುವ
ವಾಯುವನ್ನು ರಕ್ಷಿಸಿ
ಶುಚಿಯ ಮಾಡಬನ್ನಿರೆಲ್ಲ
ತನು ಮನಗಳನರ್ಪಿಸಿ

ಮನುಷ್ಯ ಇಂದು ತನ್ನ ಸ್ವಾರ್ಥದ ಆಸೆಗಾಗಿ ಅರಣ್ಯವನ್ನು ನಾಶಮಾಡುತ್ತಿದ್ದಾನೆ. ಇಂದು ವಿಜ್ಞಾನದ ಬೆಳವಣಿಗೆಯಿಂದ ಕಾರ್ಖಾನೆಗಳು ವಾಹನಗಳು ಹೆಚ್ಚುತ್ತಿದ್ದು ಅವುಗಳಿಂದ ಹೊರಸೂಸುವ ವಿಷಕಾರಿ ಅನಿಲದಿಂದ ವಾತಾವರಣದಲ್ಲಿರುವ ಶುದ್ಧವಾದ ಹವೆ ಕೆಡುತ್ತದೆ. ವಾಯುಮಾಲಿನ್ಯ, ಜಲಮಾಲಿನ್ಯ ಅಷ್ಟೇ ಅಲ್ಲದೇ ಪರಿಸರ ಮಾಲಿನ್ಯ ಉಂಟಾಗುತ್ತದೆ. ವೈಜ್ಞಾನಿಕ ಅವಿಷ್ಕಾರಗಳಿಂದಾಗುವ ಲಾಭಕ್ಕಿಂತ ದುಷ್ಪರಿಣಾಮಗಳಿಗೆ ಹೆಚ್ಚು .

ಸ್ಫಟಿಕದಂಥ ಜಲವು ಇಂದು
ಮಲಿನಗೊಳ್ಳುತ್ತಿದೆ
ಅನಾರೋಗ್ಯ ಬೆನ್ನು ಹತ್ತಿ
ಕಾಡತೊಡಗಿದೆ
ಗಂಗೆ-ತುಂಗೆ ಜಲದ ಮಡಿಲು
ವಿಷದ ಆಗರ
ಮುತ್ತುತಿಹವು ಹತ್ತು ಹಲವು
ರೋಗ ಭೀಕರ!

ನಾವು ಇಂದು ನೀರಿನ ಮೂಲಗಳಾದ ಕೆರೆ, ಬಾವಿ, ನದಿ ಮೊದಲಾದವುಗಳನ್ನು ಸರಿಯಾದ ರೀತಿಯಲ್ಲಿ ರಕ್ಷಿಸದೆ ಅವುಗಳನ್ನು ಕಲುಷಿತಗೊಳಿಸುತ್ತಿದ್ದೇವೆ. ಇದರಿಂದಾಗಿ ನಮ್ಮ ಬದುಕಿಗೆ ಸಂಚಕಾರ ಎದುರಾಗುತ್ತಿದೆ. ನಮ್ಮ ಸುತ್ತಲಿನ ನೀರಿನ ಮೂಲಗಳನ್ನು ಶುದ್ಧವಾಗಿಡುವುದು ಅತ್ಯಗತ್ಯ.

ನದಿಯನ್ನು ಮನುಷ್ಯರು ಮನಬಂದಂತೆ ಬಳಸುತ್ತಿದ್ದಾರೆ. ಅನೇಕ ಕಾರ್ಖಾನೆಗಳನ್ನು ನದಿದಂಡೆಯಲ್ಲಿ ಸ್ಥಾಪಿಸಿ ಅದರಿಂದ ಹೊರಬರುವ ರಾಸಾಯನಿಕ ಪದಾರ್ಥಗಳನ್ನು ಮತ್ತು ಕಸದ ರಾಶಿಗಳನ್ನು ನದಿಯೊಳಗೆ ಎಸೆಯುತ್ತಿದ್ದಾರೆ. ಊರಿನ ಸಮಗ್ರ ಕೊಳಚೆ ನೀರನ್ನು ನದಿಯೊಳಗೆ ಹರಿಯಬಿಟ್ಟಿದ್ದಾರೆ. ಇಷ್ಟೆಲ್ಲಾ ಶೋಷಣೆಗೆ ಬಲಿಯಾದ ನದಿ ಹೇಗೆ ಪರಿಶುದ್ಧವಾಗಿ ಹರಿಯಲು ಸಾಧ್ಯ.

ಗಂಗಾ ತುಂಗಾ ನದಿಗಳು ಇಂದು ಕಾರ್ಖಾನೆಗಳು ಬಿಡುತ್ತಿರುವ ಕೊಳಚೆ ಅರೆಬೆಂದ ಶವಗಳ ಆಗರವಾಗಿವೆ. ವಿಷಕಾರಿ ಪದಾರ್ಥಗಳಿಂದ ಕೂಡಿದ ನೀರು ಅನೇಕ ರೋಗಗಳಿಗೆ ಆಗರವಾಗಿದೆ. ಜಲಚರ ಪ್ರಾಣಿಗಳು ಅಪಾಯದ ಅಂಚಿನಲ್ಲಿವೆ. ಹಾಗಾಗಿ ಎಲ್ಲರೂ ನದಿಯನ್ನು ಶುದ್ಧಗೊಳಿಸಲು ಶ್ರಮಿಸಬೇಕು. ನದಿಯಲ್ಲಿ ಯಾವುದೇ ಮಲಿನ ವಸ್ತು ಸೇರದಂತೆ ನೋಡಿಕೊಳ್ಳಬೇಕು. ಈ ಮೂಲಕ ನದಿಯ ಮಾಲಿನ್ಯ ತಡೆಯಲು ಶ್ರಮಿಸಬೇಕು ಎಂದು ಲೇಖಕರು ಪರಿಸರ ಪ್ರಜ್ಞೆಯನ್ನು ಜಾಗೃತಗೊಳಿಸುತ್ತಿದ್ದಾರೆ.

ಕಾಡುಮರಳೆಮ್ಮ ಬಂಧು
ಬಳಗವೆಂದು ಬಗೆಯಿರಿ
ಹಸಿರು ನಮ್ಮ ಉಸಿರು ಎಂಬ
ನಿತ್ಯ ಸತ್ಯ ಅರಿಯಿರಿ
ಪರರ ಹಿತಕೆ ಹುಟ್ಟಿಕೊಂಡ
ಗಿಡವ ಕಡಿವುದೇತಕೆ
ಊರ ಸುತ್ತ ವನವು ಇರಲು
ಕಿಚ್ಚು ಹಚ್ಚು ಸ್ವರ್ಗಕೆ

ಗಿಡಗಳು ನಿಸ್ವಾರ್ಥ ಜೀವಿಗಳು, ಪರೋಪಕಾರವೇ ಅವುಗಳ ಉದ್ದೇಶ. ಮರಗಳಿಗೆ ಕೊಡುವುದು ಗೊತ್ತೇ ಹೊರತು ಪಡೆಯುವುದು ಗೊತ್ತಿಲ್ಲ. ಭೀಕರ ನಾಳೆಗಳ ಬಗ್ಗೆ ಚಿಂತೆ ಮಾಡುವ ಕವಿ ಜಂಬುನಾಥರು ಸ್ವರ್ಗಸಮಾನವಾದ ಭೂಮಿಯನ್ನು ಉಳಿಸಿಕೊಳ್ಳಲು ಮಾನವನು ಮಹಾತ್ಯಾಗ ಮಾಡಬೇಕೆಂದು ತಮ್ಮ ಕವನಗಳ ಉದ್ದಕ್ಕೂ ಮೊರೆ ಇಡುತ್ತಾರೆ.

ಕೈಗಾರೀಕರಣದ ಮೂಲಕ ನಮ್ಮ ಅರಣ್ಯ ಸಂಪತ್ತು ವಿನಾಶವಾಗುತ್ತಿದೆ. ಜಲಮಾಲಿನ್ಯ, ವಾಯುಮಾಲಿನ್ಯ, ಪರಿಸರ ಮಾಲಿನ್ಯವಾಗುತ್ತಿರುವದರಿಂದ ಅವುಗಳ ರಕ್ಷಣೆ ಮಾಡುವಂತೆ 'ಕಾಡು ಬೆಳೆಸಿ ನಾಡು ಉಳಿಸಿ' ಎಂಬ ಮಾತನ್ನು ಕವಿ ಮಕ್ಕಳಲ್ಲಿ ಮೂಡಿಸುವ ಪ್ರಯತ್ನ ಮಾಡಿದ್ದಾರೆ. ವಿಜ್ಞಾನ ಮಾನವ ಕುಲಕ್ಕೆ ವರದಾನವಾಗಿರುವಂತೆ ಹಲವು ದಿಶೆಯಲ್ಲಿ ಮಾರಕವೂ ಆಗಿದೆ. ಅದರ ಬಳಕೆಯಿಂದ ನೈಸರ್ಗಿಕ ಹಾಗೂ ಸಾಮಾಜಿಕ ಪರಿಸರದಲ್ಲಿ ಉಂಟಾಗುತ್ತಿರುವ ಮಾಲಿನ್ಯತೆಯನ್ನು ನಮಗೆ ತಿಳಿಸಿಕೊಡಲು ಪ್ರಯತ್ನಿಸಿದ್ದಾರೆ. ವಾಯು, ಜಲ, ಆಹಾರ ಮಾಲಿನ್ಯಗಳಂಥ ಅನಿಷ್ಟಗಳು ನಮ್ಮ ಬದುಕಿನ ಮೇಲೆ ಬೀರುವ ಭಯಾನಕ ಪರಿಣಾಮವನ್ನು ವಿವರಿಸಿದ್ದಾರೆ. ಜಂಬುನಾಥರು ವಿಜ್ಞಾನ ಶಿಕ್ಷಕರಾದ್ದರಿಂದ ಪರಿಸರ ಮಾಲಿನ್ಯದ ಕುರಿತು ತಿಳುವಳಿಕೆ ನೀಡಿ ಪರಿಸರ ಪ್ರಜ್ಞೆ ಮಕ್ಕಳಲ್ಲಿ ಹೆಚ್ಚುವಂತೆ ಮಾಡಿದ್ದಾರೆ.

**ಸಹಾಯಕ ಗ್ರಂಥಗಳು**


1. ನಂದನವನ - ಜಂಬುನಾಥ ಕಂಚ್ಯಾಣಿ
2. ಭಾರತೀಯ ಮಕ್ಕಳ ಸಾಹಿತ್ಯ - ನಿರುಪಮಾ
3. ಮಕ್ಕಳ ಸಾಹಿತ್ಯ ಏಕೆ ಬೇಕು? - ಟಿ. ಎಸ್. ನಾಗರಾಜಶೆಟ್ಟಿ
4. ಮಕ್ಕಳ ಸಾಹಿತ್ಯ ಹಾಗೂ ಸಿಸು ಸಂಗಮೇಶ -ರಾಜೇಂದ್ರ ಎಸ್. ಗಡಾದ